# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 982 |
| ಸದಸ್ಯರ ಹೆಸರು | : | ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 21-09-2022 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರ ಸಂ: | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಕಲಬುರಗಿ ಜಿಲ್ಲೆಯ ಅಫಜಲಪುರ ತಾಲೂಕಿನಿಂದ ಹೊಸೂರು ವರೆಗೆ ನಿರ್ಮಾಣವಾದ ರಾಜ್ಯ ಹೆದ್ದಾರಿಯಲ್ಲಿ ಸರಾಸರಿ ವಾರಕೊಮ್ಮೆಯಾದರೂ ಅಫಘಾತಗಳಿಂದಾಗಿ ಸಾವುಗಳು ಸಂಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇದುವರೆಗೂ ದಾಖಲಾದ ಪ್ರಕರಣಗಳು ಎಷ್ಟು ಹಾಗೂ ಯಾವುವು; | ಅಫಜಲಪುರ ತಾಲೂಕಿನಿಂದ ಹೊಸೂರ ವರೆಗಿನ ರಾಜ್ಯ ಹೆದ್ದಾರಿ ರಸ್ತೆಯಲ್ಲಿ ಸಣ್ಣಪುಟ್ಟ ಅಪಘಾತಗಳು ವಾಹನ ಚಾಲಕರ ನಿರ್ಲಕ್ಷ್ಯತೆಯಿಂದ ಸಂಭವಿಸಿರುತ್ತವೆ. ಸದರಿ ಅಪಘಾತಗಳಿಂದ ಸಾವು ಸಂಭವಿಸಿರುವ ಬಗ್ಗೆ ಲೋಕೋಪಯೋಗಿ ಇಲಾಖೆಯಲ್ಲಿ ವರದಿಯಾಗಿರುವುದಿಲ್ಲ. |
| ಆ) | ಈ ರಸ್ತೆಯ ನಿರ್ವಹಣೆಗಾಗಿ ಈ ಹಿಂದೆ ಅನುದಾನ ಬಿಡುಗಡೆ ಮಾಡಿದ್ದರೂ ಇದುವರೆಗೂ ರಸ್ತೆಯು ದುರಸ್ಥಿಯಾಗದೇ ನಾಮಕಾವಸ್ಥೆಗೆ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದ್ದು, ಈ ಬಗ್ಗೆ ಸರ್ಕಾರ ಕೈಗೊಳ್ಳಬಹುದಾದ ಕ್ರಮಗಳೇನು; | ಕಲಬುರಗಿ ಹೊಸೂರವರೆಗಿನ ಹೆದ್ದಾರಿಯು ಕಿ.ಮೀ.0.00 ರಿಂದ 99.80 ರವರೆಗೆ ಇದ್ದು, ಅಫಜಲಪುರದಿಂದ ಹೊಸೂರವರೆಗಿನ ರಾಜ್ಯಹೆದ್ದಾರಿ-22 ಚೈನೇಜ್ ಕಿ.ಮೀ.54.80 ರಿಂದ ಪ್ರಾರಂಭವಾಗಿ 99.60 ಕಿ.ಮೀ.ವರೆಗೆ ರಸ್ತೆಯ ಒಟ್ಟು ಉದ್ದ 44.80 ಕಿ.ಮೀ ಇರುತ್ತದೆ.<br><br>2021-22ನೇ ಸಾಲಿನಲ್ಲಿ ಮಳೆಹಾನಿ ಯೋಜನೆ ಅಡಿಯಲ್ಲಿ ಇದೇ ರಸ್ತೆ ಮೇಲೆ ಕಿ.ಮೀ.67.00 ರಿಂದ 72.00 ರವರೆಗೆ ಒಟ್ಟು 5.00 ಕಿ.ಮೀ. ನಲ್ಲಿ ರೂ.1.00 ಕೋಟಿ ಅಂದಾಜು ಮೊತ್ತದೊಂದಿಗೆ ಮರು ಡಾಂಬರೀಕರಣ ಮಾಡಲಾಗಿದೆ. ಸದರಿ ರಸ್ತೆಯು ಸುಸ್ಥಿತಿಯಲ್ಲಿದ್ದು, ವಾಹನ ಸಂಚಾರಕ್ಕೆ ಯೋಗ್ಯವಾಗಿರುತ್ತದೆ.<br><br>2022-23ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 5054 (ರಾಜ್ಯ ಹೆದ್ದಾರಿ ಸುಧಾರಣೆ) ಅಪೆಂಡಿಕ್ಸ್-ಇ ಯೋಜನೆ ಅಡಿಯಲ್ಲಿ ಕಿ.ಮೀ. 57.00 ರಿಂದ 67.00 ಹಾಗೂ ಕಿ.ಮೀ. 72.00 ರಿಂದ 77.00 ಒಟ್ಟು 15.00 ಕಿ.ಮೀ. ರಸ್ತೆಗೆ ರೂ.5.00 ಕೋಟಿ ವೆಚ್ಚದಲ್ಲಿ ಮರು ಡಾಂಬರೀಕರಣ ಕಾಮಗಾರಿಗಾಗಿ ಅನುದಾನವನ್ನು ಒದಗಿಸಲಾಗಿರುತ್ತದೆ. ಸದರಿ ಕಾಮಗಾರಿಯ ಆರ್ಥಿಕ ಬಿಡ್ ಅನುಮೋದನಾ ಹಂತದಲ್ಲಿದ್ದು, ಅನುಮೋದನೆಯ ನಂತರ ಶೀಘ್ರವಾಗಿ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು. |

<table>
<tr>
<td>ಇ)</td>
<td>ಈ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮೇಲ್ದರ್ಜೆಗೇರಿಸುವ ಆಲೋಚನೆ ಸರ್ಕಾರಕ್ಕೆ ಇದೆಯೇ? (ಮಾಹಿತಿಯನ್ನು ನೀಡುವುದು)</td>
<td>ದೇವಲ ಗಾಣಗಾಪೂರ ಯಿಂದ ಪಂಡರಾಪುರ ವಾಯಾ ತೇಲ್ಲೂರ್–ಅನ್ನುರ್–ಅಫಜಲಪೂರ–ಕರಜಗಿ–ಮನ್ನುರ್–ಇಂಡಿ ಒಟ್ಟು 43.00 ಕಿ.ಮೀ. ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸುವ ಬಗ್ಗೆ ಪರಿಶೀಲನೆಯಲ್ಲಿದೆ. ಸದರಿ ಮೇಲ್ದರ್ಜೆಗೇರಿಸುವ ರಸ್ತೆಯ ವಿವರ ಈ ಕೆಳಗಿನಂತಿವೆ.
<table>
<tr><th>ಕ್ರ ಸಂ</th><th>ರಸ್ತೆಯ ಹೆಸರು</th><th>ವರ್ಗ</th><th>ರಿಂದ</th><th>ವರೆಗೆ</th><th>ಒಟ್ಟು ಉದ್ದ (ಕಿ.ಮೀ. ಗಳಲ್ಲಿ)</th></tr>
<tr><td>1</td><td>ಅಫಜಲಪುರದಿಂದ ದೇವಲ ಘಾಣಗಾಪೂರ ವಾಯಾ ಅನ್ನುರ್, ತೆಲ್ಲೂರ್</td><td>ಜಿಲ್ಲಾ ಮುಖ್ಯ ರಸ್ತೆ</td><td>0.00</td><td>19.00</td><td>19.00</td></tr>
<tr><td>2</td><td>ಅಫಜಲಪೂರ ಯಿಂದ ಘತ್ತರಗಾ</td><td>ರಾಜ್ಯ ಹೆದ್ದಾರಿ–124</td><td>86.300</td><td>88.30</td><td>2.00</td></tr>
<tr><td>3</td><td>ಅಫಜಲಪೂರದಿಂದ ಹೊಸೂರಗೆ ಹೋಗುವ ರಸ್ತೆ</td><td>ರಾಜ್ಯ ಹೆದ್ದಾರಿ</td><td>56.005</td><td>78.005</td><td>22.00</td></tr>
<tr><td colspan="5">ಒಟ್ಟು ಉದ್ದ</td><td>43.00</td></tr>
</table>
</td>
</tr>
</table>

ಕಡತ ಸಂಖ್ಯೆ: ಲೋಇ 196 ಸಿಐಎಸ್ 2022 (ಇ)

(ಸಿ.ಸಿ. ಪಾಟೀಲ)
ಲೋಕೋಪಯೋಗಿ ಸಚಿವರು